# ಹೊಸತು



## ಲ್ಯುಮಿನೆಕ್ಸ್ ಯುನೊ ಒಡವೆ

ಆನ್‌ಲೈನ್ ಬ್ರಾಂಡ್ ಆಗಿರುವ ಲ್ಯುಮಿನೆಕ್ಸ್ ಯುನೊ ವ್ಯಾಲೆಂಟೈನ್ಸ್ ಡೇಗಾಗಿ ಒಡವೆಗಳ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕಿವಿಯೋಲೆ, ಉಂಗುರ, ಬ್ರೇಸ್ಲೆಟ್‌ಗಳು ಕುಸುರಿ ಕೆತ್ತನೆಗಳಿಂದ ಕೂಡಿದ್ದು ಪ್ಲಾಟಿನಂ, ಪಲಾಡಿಯಂ, ಬೆಳ್ಳಿ ಮತ್ತು ಚಿನ್ನದಿಂದ ತಯಾರಿಸಲಾಗಿದೆ. ಬೆಲೆ 10 ಸಾವಿರ ರೂಪಾಯಿಗಳಿಂದ ಆರಂಭ.




## ಅವೊನ್‌ನಿಂದ ಫೇಷಿಯಲ್ ಆಯಿಲ್

ಸೌಂದರ್ಯವರ್ಧಕ ಕಂಪೆನಿ ಅವೊನ್ ನೇಚರ್ ಇಫೆಕ್ಟ್ ಫೇಷಿಯಲ್ ಆಯಿಲ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಒಮೇಗಾ, ವಿಟಮಿನ್ ಸಿ ಮತ್ತು ಇ ಯಿಂದ ಸಮೃದ್ಧವಾಗಿದ್ದು ತ್ವಚೆಗೆ ಹೊಳಪು ಮತ್ತು ಕಾಂತಿ ನೀಡುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ 30 ಎಂಎಲ್ ಗೆ 729 ರೂಪಾಯಿ. ಮಾಹಿತಿಗೆ: 9873688601 / 8130081882

## ಉಷಾ ಕುಕ್‌ಟಾಪ್ಸ್

ಗೃಹೋಪಯೋಗಿ ಉತ್ಪನ್ನಗಳಿಗೆ ಹೆಸರಾದ ಉಷಾ ಇಂಟರ್‌ನ್ಯಾಷನಲ್ ಕಂಪೆನಿ ಉಷಾ ಇಂಡಕ್ಷನ್ ಕುಕ್‌ಟಾಪ್ಸ್ ಐಸಿ 3616 ಉತ್ಪನ್ನವನ್ನು ಬಿಡುಗಡೆ ಮಾಡಿದೆ. ಈ ಫ್ಯಾನ್ ಸೆನ್ಸಾರ್ ತಂತ್ರಜ್ಞಾನವನ್ನು ಹೊಂದಿದೆ. 1340 ಲಾಂಗ್ ಕಾರ್ಡ್ ಇದ್ದು ಸುಲಭವಾಗಿ ಅಡುಗೆ ಮಾಡಲು ಅನುಕೂಲಕರವಾಗಿದೆ.

ಬೆಲೆ 2715 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ವಿವರಕ್ಕೆ www.usha.com





## ಪ್ಯಾನಸೋನಿಕ್‌ನಿಂದ ಇಯರ್‌ಫೋನ್

ಪ್ಯಾನಸೋನಿಕ್ ಇಂಡಿಯಾ ಲಿಮಿಟೆಡ್ ಕಂಪೆನಿ ಅತ್ಯಾಧುನಿಕ ಗುಣಮಟ್ಟ ಮತ್ತು ಸೌಲಭ್ಯಗಳಿರುವ ಬ್ಲ್ಯೂಟೂತ್ ಸ್ಪೋರ್ಟ್ಸ್ ಇಯರ್‌ಫೋನ್ ಅನ್ನು ಬಿಡುಗಡೆ ಮಾಡಿದೆ. ಬೆಲೆ 8999 ರೂಪಾಯಿ. ವಿವರಕ್ಕೆ: 9650111769

## ಸ್ಕೆಚರ್ಸ್ ಶೂ

ಸ್ಕೆಚರ್ಸ್ ಶೂ ಹೊಸದಾಗಿ ಮಾರುಕಟ್ಟೆಗೆ ಬಂದಿದೆ. ಗುಣಮಟ್ಟದ ಸೋಲ್ ಇದ್ದು, ನಿತ್ಯ ಬಳಕೆಗೆ ಯೋಗ್ಯವಾಗಿದೆ. ಪಾದ ಊರುವ ಭಾಗ ಮೆತ್ತಗಿದ್ದು ಧರಿಸಲು ಆರಾಮದಾಯಕವಾಗಿದೆ. ವಾಕಿಂಗ್ ಹೋಗಲು, ಕಚೇರಿ ಬಳಕೆಗೆ ಯೋಗ್ಯವಾಗಿದೆ. ಹಲವು ಬಣ್ಣ ಮತ್ತು ವಿನ್ಯಾಸಗಳಲ್ಲಿ ಸಿಗುತ್ತದೆ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ.





## ಚಿನ್ನದ ಕಫ್ಲಿಂಗ್ಸ್

ರಾಘವೇಂದ್ರ ರಾಥೋರ್ ಚಿನ್ನದ ಕಫ್ಲಿಂಗ್ಸ್ ಸಂಗ್ರಹವನ್ನು ಬಿಡುಗಡೆ ಮಾಡಿದೆ. ರಾಜಸ್ತಾನ ಹುಲಿಗಳ ಪಡಿಯಚ್ಚಿನಂತಿರುವ ಈ ವಿನ್ಯಾಸ ನೋಡಲು ಆಕರ್ಷಕವಾಗಿದೆ. ಇದರಲ್ಲಿ ಬ್ರೇಸ್ಲೆಟ್ ಕೂಡ ಲಭ್ಯವಿದ್ದು ಅತ್ಯಾಧುನಿಕ ವಿನ್ಯಾಸ ಗಮನ ಸೆಳೆಯುವಂತಿದೆ. ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗೆ: 9591592468